7. ಅರಣ್ಯದ ಅಂಚಿನ ಸೂಕ್ಷ್ಮ ಪ್ರದೇಶಗಳನ್ನು ಗುರ್ತಿಸಿ ಅಲ್ಲಿನ ಬುಡಕಟ್ಟು ಜನರನ್ನು ವಾಚರುಗಳನ್ನಾಗಿ ನೇಮಿಸಿ ಕಳ್ಳಬೇಟೆ ತಡೆ ಶಿಬಿರಗಳನ್ನಾಗಿ ನಿರ್ಮಿಸುವುದು.

8. ನಡೆಯಬಹುದಾದ ವನ್ಯಜೀವಿ ಅಪರಾಧಗಳನ್ನು ಕಂಡುಹಿಡಿದು ವಿವರಗಳನ್ನು ಇಲಾಖೆಗೆ ತಿಳಿಸುವ ಬಾತ್ಮೀದಾರರು/ ಮಾಹಿತಿದಾರರು/ ಜಾಗೃತ ವ್ಯವಸ್ಥೆಗಳನ್ನು ಅಳವಡಿಸುವುದು.

9. ಅರಣ್ಯ ಪ್ರದೇಶಗಳ ಅಂಚಿನಲ್ಲಿ ಇಲಾಖೆ ಸಿಬ್ಬಂದಿಗಳನ್ನು ದಿನದ 24 ಘಂಟಗಳಲ್ಲೂ ವ್ಯವಸ್ಥಿತವಾಗಿ ಕಾವಲು ಕಾಯಲು ನೇಮಿಸಲಾಗಿದೆ ಮತ್ತು ಅವ್ಯವಸ್ಥೆಯನ್ನು ಸೂಕ್ತ ಮೇಲಧಿಕಾರಿಗಳಿಂದ ಮೇಲ್ವಿಚಾರಣೆ ಮಾಡಲಾಗುವುದು.

10. ಬೆಂಕಿ ಸಂರಕ್ಷಣೆ ಕಾರ್ಯಗಳನ್ನು ಕೈಗೊಳ್ಳುವುದು.

11. ಸಾರ್ವಜನಿಕ ಸಹಕಾರವನ್ನು ಗಳಿಸುವ ದೃಷ್ಟಿಯಿಂದ ಅರಣ್ಯದ ಭಾಗಗಳಲ್ಲಿರುವ ಜನರಿಗೆ ಆರ್ಥಿಕ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳುವುದು.

12. ಬೇಟೆಯನ್ನು ಸಂಪೂರ್ಣ ನಿಷೇಧಿಸಿ ಅಪರಾಧಿಗಳನ್ನು ವನ್ಯಜೀವಿ ಸಂರಕ್ಷಣಾ ಕಾಯ್ದೆಯ–1972 ಪ್ರಕಾರ ಮೊಕ್ಕದಮೆ ದಾಖಲು ಮಾಡುವುದು.

13. ವನ್ಯಪ್ರಾಣಿಗಳಿಂದ ಜೀವಹಾನಿ ಹಾಗೂ ಆಸ್ತಿ, ಬೆಳೆ ನಾಶ ಉಂಟಾಗುವಾಗ ವನ್ಯಪ್ರಾಣಿಗಳ ಮೇಲೆ ದ್ವೇಷದಿಂದ ಅಥವಾ ಅತೋಟಿಗಾಗಿ ಅವುಗಳಿಗೆ ತೊಂದರೆಯಾಗದಂತೆ ಸಂತ್ರಸ್ಥರಿಗೆ ಸೂಕ್ತ ಪರಿಹಾರವನ್ನು ಪಾವತಿಸುವುದು.

14. ಮೇಲಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಲುವಾಗಿ ಕೇಂದ್ರ ಹಾಗೂ ರಾಜ್ಯಸರ್ಕಾರದ ಹಲವಾರು ಯೋಜನೆಗಳನ್ನು ಜಾರಿಗೊಳಿಸುವುದು.

ಈ) ಇಲ್ಲ.

ಉ) ಅನ್ವಯಿಸುವುದಿಲ್ಲ.

818 (300)ಶ್ರೀ ನರೇಂದ್ರ ಬಾಬು ನೆ.ಲ.(ರಾಜಾಜಿನಗರ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದಲ್ಲಿ ಮುಂಗಾರು ಮಳೆಯ ಪ್ರಭಾವದಿಂದ ಮೃತಪಟ್ಟ ಜನ–ಜಾನುವಾರುಗಳ ಸಂಖ್ಯೆ ಎಷ್ಟು;

ಆ) ಮಳೆಯ ಪ್ರವಾಹದಿಂದ ಆದ ಆಸ್ತಿ–ಪಾಸ್ತಿ ನಷ್ಟವೆಷ್ಟು (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಇ) ಮುಂಗಾರು ಮಳೆಯನ್ನಾಧರಿಸಿ ಸರ್ಕಾರ ತೆಗೆದುಕೊಂಡಿರುವ ಮುಂಜಾಗ್ರತಾ ಕ್ರಮಗಳೇನು;

ಈ) ಪ್ರಕೃತಿ ವಿಕೋಪದಿಂದ ಮೃತಪಟ್ಟ ವ್ಯಕ್ತಿಗಳ ಕುಟುಂಬದವರಿಗೆ ಧನ ಸಹಾಯ ಮತ್ತು ಉದ್ಯೋಗ ನೀಡುವ ಯೋಜನೆ ಸರ್ಕಾರದ ಮುಂದಿದೆಯೇ;

ಉ) ಹಾಗಿದ್ದಲ್ಲಿ, ಸರ್ಕಾರ ಧೋರಣೆಗಳು ಯಾವುವು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) 206 ಮಾನವಜೀವಹಾನಿ ಹಾಗೂ 2786 ಜಾನುವಾರು ಪ್ರಾಣಹಾನಿಯಾಗಿರುತ್ತದೆ.

ಆ) ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ನೀಡಿದೆ.

ಇ) ಸಂತಸ್ಥರಿಗೆ ತುರ್ತು ಪರಿಹಾರ ನೀಡಲು ಹಾಗೂ ಇತರೆ ತುರ್ತು ಪರಿಹಾರ ಕೈಗೊಳ್ಳಲು ಸರ್ಕಾರವು ರೂ.9250.00 ಲಕ್ಷ ಅನುದಾನ ಬಿಡುಗಡೆ ಮಾಡಿದೆ. ತಗ್ಗು ಪ್ರದೇಶಗಳಲ್ಲಿ ವಾಸಿಸುವ ಜನರನ್ನು ಸ್ಥಳಾಂತರಿಸಲಾಗಿದೆ. ಟ್ಯಾಂಕರುಗಳ ಮೂಲಕ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆ ಮಾಡಲಾಗಿದೆ. ಸಾಂಕ್ರಾಮಿಕ ರೋಗಗಳು ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಈ) ಪರಿಹಾರ ನೀಡಲಾಗುತ್ತಿದ್ದು ಉದ್ಯೋಗ ನೀಡುವ ಪ್ರಸ್ತಾಪ ಇರುವುದಿಲ್ಲ.

ಉ) ಮೃತರ ಕುಟುಂಬದವರಿಗೆ ತಲಾ ರೂ.1.00 ಲಕ್ಷ ಪರಿಹಾರಧನ ನೀಡಲಾಗುತ್ತಿದೆ.

Annexure

Details of loss due to Heavy rain / flood during 2007

(Rs. in lakhs)

			Cattle / Live Stock		Houses Damaged		Infrastructure damaged	Crop Loss		
		Human lives lost	Lost	Estimated loss	Nos	Estimated loss	Estimated loss	Area effected	Estimated loss	Estimated loss
1	Bangalore (U)	1								0.00
2	Bagalkote	10	11	1.10	6214	214.12	1533.05	205		1748.27
3	Bellarry	7	22	2.20	3640	98	632.85	3	0.095	733.12
4	Bidar	12	25	2.50			1315.19			1317.69
5	Bijapur	18	1729	145.90	6302	576.55	3411.6	205	0.05	4134.10
6	Belgaum	21			4316	431.8	4694.54	18059	7697	13023.34
7	Chamarajanagar	2			69	2.925	155.2	37.22	0.11	158.24
8	Chikamagalur		7	0.70	169	33.4	1992.73	1050.25	13.6	2040.43
9	Chitradurga	5	85	4.00	204	8.63	123.9	43.02	0.8	137.33
10	Dakshina kannada	10	1	0.10	752	36.46	1259.52			1296.10
11	Davanagere	6	19	1.90	125	2.87	1158.81			1163.38
12	Dharwad	5	72	5.85	620	10.95	457.28			474.08
13	Gadag	4					36.5			36.50
14	Gulbarga	12			2840	56.155	1304.35	950.3		1360.51
15	Hassan	15	13	1.30	1009	22.385	2477.438	260.5	369.32	2870.44
16	Haveri	5	181	2.16	186	2.79	325.38	212	2.1	332.45
17	Kodugu	4			983	13.73	3241.05	996	136.1	3390.88
18	Kolar	5								0.00
19	Koppal	7	79	3.40	1305	27.705	347.06	220.88		378.19
20	Mandya	2								0.00
21	Mysore	13	6	0.60	812	24.05	1241.61	125	2.99	1269.25
22	Raichur	16	322	23.20	16186	421.125	2838.33	2277.38	220.14	3502.80
23	Shimoga	11	35	2.60	96	23.75	2253.35	890	35.85	2315.55
24	Tumkur	8	167	9.50	127	6.79		21.6	0.53	16.82
25	Udupi	6			227	23.6	7.86			31.46
26	Uttara Kannada	2	12	1.20	637	11.98	634.73	2	0.02	647.91
	Total	394	2796	396.23	46666	2648.795	31642.169	26866.95	9479.88	42378.94

819 (1292) ಶ್ರೀ ಓಲೇಕಾರ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಹಾವೇರಿ ಜಿಲ್ಲೆಯಲ್ಲಿ ಹೆಚ್ಚು ಗೋವಿನ ಜೋಳವನ್ನು ಬೆಳೆಯುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪೂರಕ ವಸ್ತುಗಳನ್ನು ತಯಾರಿಸಿ ಬೇರೆ ರಾಜ್ಯದಲ್ಲಿ ಲಾಭ ಗಳಿಸುತ್ತಿರುವುದರಿಂದ ಹಾವೇರಿ ಜಿಲ್ಲೆಯಲ್ಲಿಯೇ ಪೂರಕ ಕೈಗಾರಿಕೆಗಳನ್ನು ಪ್ರಾರಂಭಿಸಿ, ನಿರುದ್ಯೋಗಿ ಯುವಕರಿಗೆ ಹಾಗೂ ರೈತರಿಗೆ ಅನುಕೂಲ ಮಾಡಲು ಸರ್ಕಾರ ಉದ್ದೇಶಿಸಿದೆಯೇ?